**ಓ ಎಸ್ ನಂಃ 40-22**
**ಪಿ ಡಬ್ಲ್ಯೂ ಃ 1**

**ದಿಃ 17-04-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎಚ್ ಎನ್ ಎಸ್ ವಕೀಲರಿಂದ**

12. ನಾನು ಕಲ್ಲಟ್ಟಿಪಾಳ್ಯದಲ್ಲಿ 25 ವರ್ಷಗಳಿಂದ ವಾಸಮಾಡುತ್ತಿದ್ದೇನೆ. ಈ ದಾವೆಯನ್ನು ನಾನು ಸಿದ್ದಮ್ಮ, ಯಶೋಧ, ದೇವು ಮತ್ತು ಜಯಮ್ಮರವರ ವಿರುದ್ದ ಹೂಡಿರುತ್ತೇನೆ. ಈ ದಾವೆಯನ್ನು 3 ಆಸ್ತಿಗಳ ಮೇಲೆ ಹೂಡಿರುತ್ತೇನೆ. ನನಗೆ ದಾವಾ ಆಸ್ತಿಗಳ ಸರ್ವೆ ನಂಬರ್ ಹಾಗೂ ವಿಸ್ತೀರ್ಣ ಗೊತ್ತಿಲ್ಲ. ದಾವಾ ಆಸ್ತಿಗಳ ಅಕ್ಕಪಕ್ಕದಲ್ಲಿ ಯಾರ ಯಾರ ಜಮೀನುಗಳು ಇವೆ ಗೊತ್ತಿಲ್ಲ. ನಾನು ದಾವಾ ಆಸ್ತಿಗಳನ್ನು ನೋಡಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳ ಖಾತೆ ಮತ್ತು ಪಹಣಿ ಜಯಮ್ಮರವರ ಹೆಸರಿನಲ್ಲಿ ಬರುತ್ತಿದೆ. ಜಯಮ್ಮರವರು ನಾರಾಯಣಪ್ಪರವರ ಹೆಂಡತಿ ಎಂದರೆ ನಿಜ. ನಾರಾಯಣಪ್ಪರವರು ವೆಂಕಟರಮಣಯ್ಯ ಬಿನ್ ನಂಜುಂಡಪ್ಪರವರ ಮಗ ಎಂದರೆ ನಿಜ.

13. ನಾರಾಯಪ್ಪರವರ ಮದುವೆ ನನ್ನ ಮದುವೆಯಾದ 7-8 ವರ್ಷದ ನಂತರ ಆಗಿರುತ್ತದೆ. ನನ್ನ ತವರು ಮನೆ ಓಬಳಾಪುರ ಆಗಿರುತ್ತದೆ. ಓಬಳಾಪುರ ನೆಲಮಂಗಲ ತಾಲ್ಲೂಕಿನಲ್ಲಿ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಬರುತ್ತದೆ. ಓಬಳಾಪುರದಿಂದ ಕಲ್ಲಟ್ಟಿಪಾಳ್ಯ ಎಷ್ಟು ದೂರ ಆಗುತ್ತದೆ ಗೊತ್ತಿಲ್ಲ. ನಾನು ಮದುವೆಯಾದಾಗಿನಿಂದ ಕಲ್ಲಟ್ಟಿಪಾಳ್ಯದಲ್ಲಿ ವಾಸವಿರುತ್ತೇನೆ ಎಂದರೆ ಕಲ್ಲಪಾಳ್ಯದಲ್ಲಿ ಸ್ವಲ್ಪ ದಿನ ಇರುತ್ತೇನೆ ಎಂದು ಹೇಳುತ್ತಾರೆ. ನನ್ನ ಗಂಡನ ಹೆಸರು ನಂಜುಂಡುಪ್ಪ ಎಂದರೆ ನಿಜ. ನಂಜುಂಡಪ್ಪರವರ ತಂದೆಯ ಹೆಸರು ರಂಗಯ್ಯನ ಮಗ ವೆಂಕಟರಮಣಯ್ಯ ಎಂದರೆ ನಿಜ.

14. ನನ್ನ ವಾದ ಪತ್ರಕ್ಕೆ ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ. ನಾನು ಈ ದಾವೆಯನ್ನು ಹೂಡುವ ಕಾಲಕ್ಕೆ ಜಯಮ್ಮರವರ ವಯಸ್ಸು 70 ವರ್ಷ ಆಗಿತ್ತು ಎಂದರೆ ನಿಜ. ಈ ದಾವೆಯನ್ನು ಹೂಡುವ ಕಾಲಕ್ಕೆ 2ನೇ ಪ್ರತಿವಾದಿಯ ವಯಸ್ಸು 52 ವರ್ಷ ಆಗಿತ್ತು ಎಂದರೆ ನಿಜ, ಅದೇ ರೀತಿ 3ನೇ ಪ್ರತಿವಾದಿಯ ವಯಸ್ಸು 32 ವರ್ಷ ಆಗಿತ್ತು ಎಂದರೆ ನಿಜ. 4ನೇ ಪ್ರತಿವಾದಿಗೆ ಈ ದಾವೆಯನ್ನು ಹೂಡುವಾಗ ವಯಸ್ಸು 40 ವರ್ಷ ಆಗಿತ್ತು ಎಂದರೆ ನಿಜ, ಅದೇ ರೀತಿ 5ನೇ ಪ್ರತಿವಾದಿಗೆ 36 ವರ್ಷ ವಯಸ್ಸು ಆಗಿತ್ತು ಎಂದರೆ ನಿಜ. 2ನೇ ಪ್ರತಿವಾದಿ ತಮ್ಮ ಮದುವೆಯಾದಾಗಿನಿಂದ ಪರ್ವತಪುರ ರಸ್ತೆ, 9ನೇ ವಾರ್ಡ್, ದೇವನಹಳ್ಳಿ ಟೌನ್ ನಲ್ಲಿ ವಾಸವಿರುತ್ತಾರೆ ಎಂದರೆ ನಿಜ. 2ನೇ ಪ್ರತಿವಾದಿ ಪಾಲನಹಳ್ಳಿಯಲ್ಲಿ ವಾಸವಿರುತ್ತಾರೆಂದು ಸುಳ್ಳು ವಿಳಾಸ ಕೊಟ್ಟಿರುತ್ತೇನೆ ಎಂದರೆ ಅವರು ಪಾಲನಹಳ್ಳಿಯಲ್ಲಿ ವಾಸವಿರುತ್ತಾರೆ ಎಂದು ಹೇಳುತ್ತಾರೆ. ನನ್ನ ಗಂಡ ನಂಜುಂಡಪ್ಪರವರು ರಂಗಯ್ಯನ

ಮಗ ವೆಂಕಟರಮಣಯ್ಯ ರವರ ಮಗ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ನಾನು ಈ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ನಂಜುಂಡಪ್ಪರವರು ಯಾವ ದಿನಾಂಕ, ತಿಂಗಳು ಮತ್ತು ವರ್ಷ ತೀರಿಕೊಂಡಿರುತ್ತಾರೆ ಗೊತ್ತಿಲ್ಲ. ನಂಜುಂಡಪ್ಪರವರನ್ನು ಕಲ್ಲಟ್ಟಿಪಾಳ್ಯದ ಯಾವ ಸರ್ವೆ ನಂಬರ್ ನಲ್ಲಿ ಮಣ್ಣು ಮಾಡಲಾಗಿದೆ ಎಂದರೆ ಅವರನ್ನು ಪಾಲನಹಳ್ಳಿಯಲ್ಲಿ ಮಣ್ಣು ಮಾಡಲಾಗಿದೆ ಎಂದು ಹೇಳುತ್ತಾರೆ. ನಂಜುಂಡಪ್ಪರವರನ್ನು ಪಾಲನಹಳ್ಳಿಯ ನನ್ನ ಚಿಕ್ಕಪ್ಪನ ಜಮೀನಿನಲ್ಲಿ ಮಣ್ಣು ಮಾಡಿರುತ್ತಾರೆ. ನನ್ನ ಚಿಕ್ಕಪ್ಪನ ಹೆಸರು ಕೃಷ್ಣಪ್ಪ ಆಗಿರುತ್ತದೆ. 1ನೇ ಪ್ರತಿವಾದಿಯ ಗಂಡ ಯಾವ ದಿನಾಂಕ, ತಿಂಗಳು ಮತ್ತು ವರ್ಷ ತೀರಿಕೊಂಡಿರುತ್ತಾರೆ ಗೊತ್ತಿಲ್ಲ. 1ನೇ ಪ್ರತಿವಾದಿಯ ಗಂಡನನ್ನು ನಮ್ಮ ಜಮೀನಿನಲ್ಲಿ ಮಣ್ಣು ಮಾಡಿರುತ್ತಾರೆ. ಯಾವ ಸರ್ವೆ ನಂಬರ್ ನಲ್ಲಿ ಮಣ್ಣು ಮಾಡಿರುತ್ತಾರೆ ಎಂದರೆ 1ನೇ ಪ್ರತಿವಾದಿಯ ಮನೆಯ ಮುಂದುಗಡೆ ಇರುವ ಜಮೀನಿನಲ್ಲಿ ಮಣ್ಣು ಮಾಡಿರುತ್ತಾರೆ ಎಂದು ಹೇಳುತ್ತಾರೆ.

**ಈ ಹಂತದಲ್ಲಿ ಪಾಟೀ ಸವಾಲು ಮುಂದುವರೆಸಲು ಕಾಲವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**